KABI010025682025

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**

**<u>ಬಳ್ಳಾರಿ.</u>**

-: <u>ಉಪಸ್ಥಿತರು</u>:-

**ಶ್ರೀಮತಿ ಕೆ.ಜಿ.ಶಾಂತಿ**, ಬಿ.ಕಾಂ., ಎಲ್‌ಎಲ್.ಎಂ.,

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು

ಬಳ್ಳಾರಿ.

ದಿನಾಂಕ: 15 ನೇ ದಿವಸ ಸೆಪ್ಟೆಂಬರ್ ಮಾಹೆಯ 2025 ನೇ ಇಸವಿಯಂದು.

**<u>ಸತ್ರ ಮೊಕದ್ದಮೆ ಸಂಖ್ಯೆ: 34/2025</u>**

**<u>ಫಿರ್ಯಾದುದಾರರು:--</u>**

ಕರ್ನಾಟಕ ಸರಕಾರದ ಪರವಾಗಿ
ಆರಕ್ಷಕ ಉಪ -ನಿರೀಕ್ಷಕರು (ತನಿಖೆ ವಿಭಾಗ),
ಹಚ್ಚೊಳ್ಳಿ ಆರಕ್ಷಕ ಠಾಣೆ, ಹಚ್ಚೊಳ್ಳಿ,
ಬಳ್ಳಾರಿ ಜಿಲ್ಲೆ- 583121.

**(ಮಾನ್ಯ ಸರಕಾರಿ ಅಭಿಯೋಜಕರ ಮೂಲಕ ಪ್ರತಿನಿಧಿಸಿರುತ್ತಾರೆ.)**

**-ವಿರುದ್ಧ-**

**ಆರೋಪಿತರು:-**

ಶೇಖರ್, ತಂದೆ. ಹುಸ್ಸೇನಪ್ಪ,
ವಯಸ್ಸು 35 ವರ್ಷ, ಕೂಲಿಕಾರ್ಮಿಕ,
ವಾಸಃ ಕುರುವಳ್ಳಿ ಗ್ರಾಮ,
ಸಿರುಗುಪ್ಪ ತಾಲ್ಲೂಕು,
ಬಳ್ಳಾರಿ ಜಿಲ್ಲೆ.

**(ಶ್ರೀ/ಶ್ರೀಮತಿ ಹಾಜಿ ರಫೀಯಾ ಜಬೀನ್, ವಕೀಲರು (ಎಲ್‌ಎಡಿಸಿ) ಇವರ ಮೂಲಕ ಪ್ರತಿನಿಧಿಸಿರುತ್ತಾರೆ.)**

-

**ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 483 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ**

ಈ ಅರ್ಜಿಯನ್ನು ಆರೋಪಿತನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ರ ಕಲಂ 483 ರಡಿಯಲ್ಲಿ ಸಲ್ಲಿಸಿ, ಈ ಪ್ರಕರಣದಲ್ಲಿ ತನ್ನನ್ನು ನಿಯತಕಾಲಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ, ಹಚ್ಚೊಳ್ಳಿ ಠಾಣಾ ವ್ಯಾಪ್ತಿಯ ಕುರುವಳ್ಳಿ ಗ್ರಾಮದಲ್ಲಿರುವ ಚಾಸಾ- 1 ಮೂಕಮ್ಮ ಇವರ ಮನೆಯ ಮುಂದೆ ಆರೋಪಿತನು ಐದಾರು ದಿನಗಳ ಹಿಂದೆ ರಾತ್ರಿ ಸಮಯದಲ್ಲಿ ಕುಡಿದು ಓಡಾಡುತ್ತಾ, ಕೂಗಾಡುತ್ತಿದ್ದಾಗ ಚಾಸಾ- 1 ಮತ್ತು ಚಾಸಾ- 10 ಇವರು ಸೇರಿಕೊಂಡು ಆರೋಪಿತನಿಗೆ ನಮ್ಮ ಮನೆಯ ಮುಂದೆ ಕೂಗಾಡಬೇಡ ಎಂದು ಹೇಳಿದ್ದಕ್ಕೆ , ಆರೋಪಿತನು ಚಾಸಾ- 1 ಇವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಜೀವಬೆದರಿಕೆ ಹಾಕಿ ಹೋಗಿರುತ್ತಾನೆ. ಆರೋಪಿತನು ಚಾಸಾ- 1 ಇವರ ಮೇಲೆ ದ್ವೇಷ ಇಟ್ಟುಕೊಂಡು, ಅವರನ್ನು ಕೊಲೆ ಮಾಡುವ ಉದ್ದೇಶದಿಂದ ದಿನಾಂಕ 27/02/2025 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಚಾಸಾ- 1 ಇವರ ಮನೆಯ ಹತ್ತಿರ ಕೂಗಾಡುತ್ತಿದ್ದಾಗ, ಚಾಸಾ- 1 ಇವರು ಆರೋಪಿತನಿಗೆ ನಮ್ಮಮನೆಯ ಮುಂದೆ ಕೂಗಾಡಬೇಡ ಎಂದು ಹೇಳಿದ್ದಕ್ಕೆ, ಆರೋಪಿತನು ಚಾಸಾ- 1 ಇವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಆತನು ತಂದಿದ್ದ ಈಳಿಗೆಯಿಂದ ಚಾಸಾ- 1 ಇವರ ಕುತ್ತಿಗೆಗೆ ಹೊಡೆಯಲು ಹೋದಾಗ ತಪ್ಪಿಸಿಕೊಳ್ಳಲು ಚಾಸಾ- 1 ಇವರು ತಮ್ಮ ಎಡಗೈ ಯನ್ನು ಅಡ್ಡ ಹಿಡಿದುಕೊಂಡಾಗ ಎಡಗಣ್ಣಿನ ಹುಬ್ಬಿನ ಹತ್ತಿರ ತೆರಚಿದ ಗಾಯವಾಗಿ, ನಂತರ ಈಳಿಗೆ ಏಟು ಎಡಮುಂಗೈಗೆ ಬಿದ್ದು ಗಂಭೀರ ಸ್ವರೂಪದ ರಕ್ತಗಾಯ ಹಾಗೂ ಮೂಳೆಮುರಿಯುವಂತೆ ಹೊಡೆದು, ನಂತರ ಎರಡು ಮುಂಗೈ, ಬಲಮೊಣಕೈ

ಹಿಂದುಗಡೆ, ಎರಡು ಕೈಗಳ ಬೆರಳಿನ ಹಿಂದುಗಡೆ, ಎಡಭುಜದ ಹತ್ತಿರ ಹೊಡೆದು ಸಾದಾ ಸ್ವರೂಪದ ರಕ್ತದ ಗಾಯಗಳನ್ನು ಮಾಡಿರುತ್ತಾನೆ. ತದನಂತರ, ಗಾಯಾಳು ಚಾಸಾ- 1 ಇವರನ್ನು ಚಾಸಾ- 6 ಮತ್ತು 7 ಇವರು ಖಾಸಗಿ ವಾಹನದಲ್ಲಿ ಸಿರುಗುಪ್ಪ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ- 1 ಇವರನ್ನು ಚಾಸಾ- 6, ಚಾಸಾ-7 ಹಾಗೂ ಚಾಸಾ-11 ಇವರು ಸೇರಿಕೊಂಡು ವಿಮ್ಸ್ ಆಸ್ಪತ್ರೆ, ಬಳ್ಳಾರಿಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ಈ ಬಗ್ಗೆ ಚಾಸಾ- 1 ಇವರು ಹಚ್ಚೊಳ್ಳಿಆರಕ್ಷಕ ಠಾಣೆಗೆ ದೂರನ್ನು ಸಲ್ಲಿಸಿದ್ದು, ಸದರಿ ಆರಕ್ಷಕ ಠಾಣೆಯವರು ಪ್ರಕರಣವನ್ನು ಅಪರಾಧ ಸಂಖ್ಯೆ: 14/2025 ರಲ್ಲಿ ಭಾರತ ನ್ಯಾಯ ಸಂಹಿತೆ, 2023 ರ ಕಲಂ 109, 351(2) ಮತ್ತು 352 ರಡಿಯಲ್ಲಿ ಪ್ರಕರಣ ದಾಖಲು ಮಾಡಿ, ಆರೋಪಿತನನ್ನು ಬಂಧಿಸಿ ದಿನಾಂಕ 28/02/2025 ರಂದು ಸಿರುಗುಪ್ಪದ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ತನಿಖೆಯನ್ನು ಕೈಗೊಂಡು, ತನಿಖೆ ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಭಾರತೀಯ ನ್ಯಾಯ ಸಂಹಿತೆಯ ಕಲಂ 109, 351(2), 352, 118(1) ಮತ್ತು 118(2) ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ಈಗ ಆರೋಪಿತನು ತನ್ನ ಬಂಧನದ ದಿನಾಂಕದಿಂದ ನ್ಯಾಯಾಂಗ ಅಭಿರಕ್ಷೆಯಲ್ಲಿರುತ್ತಾನೆ.

3. ಆರೋಪಿತನು ತನ್ನ ಅರ್ಜಿಯಲ್ಲಿ ತಾನು ಕಾನೂನು ಪಾಲಿಸುವ ನಾಗರಿಕನಾಗಿದ್ದು, ಆಪಾದಿತ ಅಪರಾಧವನ್ನು ಮಾಡಿಲ್ಲ, ತನ್ನನ್ನು ಈ ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ, ಆಪಾದಿತ ಅಪರಾಧಗಳು ಜಾಮೀನು ರಹಿತವಾಗಿದ್ದರೂ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಗುರಿಯಾಗುವುದಿಲ್ಲ, ತಾನು ತನ್ನ ವೃದ್ಧ ಹೆತ್ತವರ ಏಕೈಕ ಪುತ್ರ, ತನ್ನ ಹೆತ್ತವರು

ಅನಾರೋಗ್ಯದಿಂದ ಬಳಲುತ್ತಿರುವುದರಿಂದ ತನ್ನ ಆರೈಕೆ ಅವರಿಗೆ ಅತ್ಯಗತ್ಯವಾಗಿದೆ, ತನ್ನ ಕುಟುಂಬದೊಂದಿಗಿನ ಹಳೆಯ ದ್ವೇಷದಿಂದಾಗಿ ದೂರುದಾರರು ಈ ಪ್ರಕರಣದಲ್ಲಿ ನಿರಪರಾಧಿಯಾದ ತನ್ನನ್ನು ಸಿಲುಕಿಸುವ ಉದ್ದೇಶದಿಂದ ಸುಳ್ಳು ಕಥೆಯನ್ನು ಸೃಷ್ಟಿಸಿದ್ದಾರೆ, ಘಟನೆಗೆ ಯಾವುದೇ ಪ್ರತ್ಯಕ್ಷ ಸಾಕ್ಷಿ ಇಲ್ಲ ಮತ್ತು ಇಡೀ ಪ್ರಕರಣವು ದೂರುದಾರರ ಕಥೆಯ ಮೇಲೆ ಮಾತ್ರ ನಿಂತಿದೆ, ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ತನ್ನ ವಿರುದ್ಧ ಯಾವುದೇ ಬಲವಾದ ಸಾಂದರ್ಭಿಕ ಪುರಾವೆಗಳಿಲ್ಲ, ದಿನಾಂಕ 28/02/2025 ರಿಂದ ತಾನು ನ್ಯಾಯಾಂಗ ಬಂಧನದಲ್ಲಿದ್ದೇನೆ, ತನ್ನೊಂದಿಗೆ ದ್ವೇಷ ಸಾಧಿಸುವ ಜನರ ನಿಮಿತ್ತ ತನ್ನನ್ನು ಈ ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ, ತಾನು ತುಂಬಾ ಬಡವನಾಗಿದ್ದು, ತನ್ನ ಕುಟುಂಬದ ಕೇವಲ ಸಂಪಾದಿಸುವ ಏಕೈಕ ಸದಸ್ಯನಾಗಿರುವುದಾಗಿ, ತನ್ನನ್ನು ನ್ಯಾಯಾಂಗ ಬಂಧನದಲ್ಲಿಯೇ ಮುಂದುವರಿದರೆ, ತನ್ನ ಕುಟುಂಬದ ಉಳಿದ ಸದಸ್ಯರು ಬೀದಿಗೆ ಬೀಳುತ್ತಾರೆ ಮತ್ತು ತನ್ನ ಭವಿಷ್ಯ ಹಾಳಾಗುತ್ತದೆ, ತನ್ನ ವಿರುದ್ಧ ಕಿರುಕುಳದ ಬಗ್ಗೆ ದೂರುದಾರರು ಈ ಹಿಂದೆ ಯಾವುದೇ ದೂರುಗಳನ್ನು ನೀಡಿಲ್ಲ, ತಾನು ಮದ್ಯವ್ಯಸನಿಯಲ್ಲ ಮತ್ತು ಕೇವಲ ಸುಳ್ಳು ದೂರು ನೀಡಿದ್ದಕ್ಕಾಗಿ ತನ್ನನ್ನು ಮದ್ಯವ್ಯಸನಿ ಎಂದು ಹಣೆಪಟ್ಟಿ ಕಟ್ಟಲಾಗುತ್ತಿದೆ ಎಂದು ಹೇಳಿರುತ್ತಾನೆ. ಮುಂದುವರೆದು, ಆರೋಪಿತನು ತಾನು ಬಂಧನವಾದಾಗಿನಿಂದ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದು, ಫಿರ್ಯಾದುದಾರ ಆರಕ್ಷಕರು ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆಪಾದನಾ ಪತ್ರವನ್ನು ಸಲ್ಲಿಸಿರುವುದರಿಂದ, ತನ್ನ ನ್ಯಾಯಾಂಗ ಬಂಧನವನ್ನು ಮುಂದುವರಿಸುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ಮುಂದುವರೆದು, ಒಂದು ವೇಳೆ ಜಾಮೀನು ನೀಡಿದಲ್ಲಿ, ತಾನು ನ್ಯಾಯಾಲಯವು ವಿಧಿಸುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರುವುದಾಗಿ, ವಿಚಾರಣೆಗೆ ಸಹಕರಿಸುವುದಾಗಿ ಮತ್ತು

ಸಾಕ್ಷಿದಾರರನ್ನು ಬೆದರಿಸುವುದಿಲ್ಲ, ಸಾಕ್ಷ್ಯ ನಾಶಪಡಿಸುವುದಿಲ್ಲ ಹಾಗೂ ಸೂಕ್ತ ಜಾಮೀನುದಾರರನ್ನು ನೀಡುವುದಾಗಿ ಹೇಳಿದ್ದು, ತನ್ನನ್ನು ನಿಯತಕಾಲಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಹಾಗೂ ತಮ್ಮ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಸರಕಾರಿ ಅಭಿಯೋಜಕರು ಆರೋಪಿತನು ಸಲ್ಲಿಸಿದ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ, ಫಿರ್ಯಾದಿನಲ್ಲಿ ಹೇಳಿರುವಂತಹ ಅಂಶಗಳನ್ನು ಪುನರುಚ್ಛರಿಸುತ್ತಾ, ಈ ಪ್ರಕರಣದಲ್ಲಿ ಆರೋಪಿತನು ಚಾಸಾ- 1 ಇವರನ್ನು ಈಳಿಗೆಯಿಂದ ಹೊಡೆದು ಕೊಲೆ ಮಾಡುವ ಪ್ರಯತ್ನ ವನ್ನು ಮಾಡಿದ್ದಾನೆ, ಅವಾಚ್ಯ್ಯ ಶಬ್ಧಗಳಿಂದ ಬೈದು ಜೀವಬೆದರಿಕೆ ಹಾಕಿರುತ್ತಾನೆ ಎಂಬದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ಹೇಳಿರುತ್ತಾರೆ. ಮುಂದುವರೆದು ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಆತನು ಹೊರಗಡೆ ಬಂದು ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ, ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಳ್ಳುವ ಮತ್ತು ಫಿರ್ಯಾದುದಾರರಿಗೆ ಬೆದರಿಕೆ ಹಾಕುವ ಸಾಧ್ಯತೆ ಇರುತ್ತದೆ ಎಂದು ಹೇಳಿರುತ್ತಾರೆ. ಮುಂದುವರೆದು ಆರೋಪಿತನು ಗಂಭೀರ ಸ್ವರೂಪದ ಹಾಗೂ ಜಾಮೀನುರಹಿತ ಅಪರಾಧವೆಸಗಿದ್ದು, ಜಾಮೀನು ಪಡೆಯಲು ಅರ್ಹನಿರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿತನನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡು ಹೋಗುವ ಸಾಧ್ಯತೆ ಇರುತ್ತದೆ ಮತ್ತು ನಂತರ ಈತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದು ಕಷ್ಟವಾಗುತ್ತದೆ. ಆದ್ದರಿಂದ, ಈ ಎಲ್ಲಾ ಕಾರಣಗಳಿಗಾಗಿ ಆರೋಪಿತನು ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯ ಪಕ್ಷಗಾರರ ವಾದ-ವಿವಾದವನ್ನು ಆಲಿಸಲಾಯಿತು.

6. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆಃ -

1) ಆರೋಪಿತನು ಈ ಹಂತದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 483 ರಡಿಯಲ್ಲಿ ನಿಯತಕಾಲಿಕ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

2) ಹಾಗಿದ್ದರೆ, ಯಾವ ಆದೇಶ?

7. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಾಣಿಸಿದಂತಿದೆಃ-

1 ನೇ ಅಂಶಃ **ಸಕಾರಾತ್ಮಕ**ವಾಗಿ,

2 ನೇ ಅಂಶಃ ಈ ಕೆಳಕಂಡ ಕಾರಣಗಳಿಗಾಗಿ, ಅಂತಿಮ ಆದೇಶದಂತೆಃ-

## ಕಾರಣಗಳು

8. **ಅಂಶಃ 1 -** ಅಭಿಯೋಜನೆಯ ಪ್ರಕಾರ, ದಿನಾಂಕ 27/02/2025 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಆರೋಪಿತನು ಚಾಸಾ- 1 ಇವರ ಮೇಲೆ ದ್ವೇಷ ಇಟ್ಟುಕೊಂಡು ಕೊಲೆ ಮಾಡುವ ಉದ್ದೇಶದಿಂದ ಚಾಸಾ- 1 ಇವರ ಮನೆಯ ಮುಂದೆ ಕುಡಿದು ಬಂದು ಕೂಗಾಡುತ್ತಿದ್ದಾಗ, ಚಾಸಾ- 1 ಇವರು ತಮ್ಮ ಮನೆಯ ಮುಂದೆ ಕೂಗಾಡಬೇಡ ಎಂದು ಹೇಳಿದ್ದಕ್ಕೆ, ಆರೋಪಿತನು ಚಾಸಾ- 1 ಇವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಈಳಿಗೆಯಿಂದ ಚಾಸಾ- 1 ಇವರ ಕುತ್ತಿಗೆಗೆ ಹೊಡೆಯಲು ಹೋದಾಗ ತಪ್ಪಿಸಿಕೊಳ್ಳಲು ಚಾಸಾ- 1 ಇವರು ತಮ್ಮ ಎಡಗೈ ಯನ್ನು ಅಡ್ಡ ಹಿಡಿದುಕೊಂಡಾಗ ಎಡಗಣ್ಣಿನ ಹುಬ್ಬಿನ ಹತ್ತಿರ ತೆರಚಿದ ಗಾಯವಾಗಿ, ನಂತರ ಈಳಿಗೆ ಏಟು ಎಡಮುಂಗೈಗೆ ಬಿದ್ದು ಗಂಭೀರ ಸ್ವರೂಪದ ರಕ್ತಗಾಯ ಹಾಗೂ

ಮೂಳೆಮುರಿಯುವಂತೆ ಹೊಡೆದು, ನಂತರ ಎರಡು ಮುಂಗೈ, ಬಲಮೊಣಕೈ ಹಿಂದುಗಡೆ, ಎರಡು ಕೈಗಳ ಬೆರಳಿನ ಹಿಂದುಗಡೆ, ಎಡಭುಜದ ಹತ್ತಿರ ಹೊಡೆದು ಸಾದಾ ಸ್ವರೂಪದ ರಕ್ತದ ಗಾಯಗಳನ್ನು ಮಾಡಿರುತ್ತಾನೆ ಎಂದಾಗಿರುತ್ತದೆ.

9. ಆರೋಪಿತನ ಅನುಸಾರವಾಗಿ, ತಾನು ಅಮಾಯಕನಿದ್ದು, ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ತನ್ನನ್ನು ಈ ಪ್ರಕರಣದಲ್ಲಿ ಸುಳ್ಳು ಆರೋಪ ಹೊರಿಸಿ, ಸಿಲುಕಿಸಲಾಗಿದೆ ಎಂದು ಹೇಳಿರುತ್ತಾರೆ. ಮುಂದುವರೆದು, ತಾನು ಬಂಧನವಾದಾಗಿನಿಂದಲೂ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದು, ಈಗ ಫಿರ್ಯಾದುದಾರ ಆರಕ್ಷಕರು ತನಿಖೆ ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಆಪಾದನಾ ಪತ್ರವನ್ನು ಸಲ್ಲಿಸಿರುವುದರಿಂದ, ತನ್ನನ್ನು ನ್ಯಾಯಾಂಗ ಬಂಧನದಲ್ಲಿರಿಸಿ ವಿಚಾರಣೆ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು, ತಾನು ನ್ಯಾಯಾಲಯವು ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ಹೇಳಿರುತ್ತಾನೆ.

10. ಪ್ರಾಜ್ಞ ಆರೋಪಿತನ ಪರ ವಕೀಲರು ತಮ್ಮ ವಾದ ಮಂಡನೆ ಕಾಲದಲ್ಲಿ ಆರೋಪಿತನು ಯಾವುದೇ ಪೂರ್ವಗತ ಅಪರಾಧದ ಹಿನ್ನೆಲೆವುಳ್ಳವನಾಗಿರುವುದಿಲ್ಲ, ಆತನು ನ್ಯಾಯಾಲಯವು ವಿಧಿಸುವ ಷರತ್ತುಗಳನ್ನು ಪಾಲನೆ ಮಾಡಲು ಸಿದ್ಧನಿದ್ದಾನೆ, ಆದ್ದರಿಂದ ಆರೋಪಿತನಿಗೆ ನಿಯತಕಾಲಿಕ ಜಾಮೀನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

11. ಪ್ರಾಜ್ಞ ಸರಕಾರಿ ಅಭಿಯೋಜಕರು ತಮ್ಮ ವಾದ ಮಂಡನೆ ಕಾಲದಲ್ಲಿ ಈ ಪ್ರಕರಣದಲ್ಲಿ ಆರಕ್ಷಕರು ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರೂ, ಆರೋಪಿತನು ಜಾಮೀನು ಪಡೆಯಲು ಅರ್ಹನು ಎಂದು ತಿಳಿಯತಕ್ಕದ್ದಲ್ಲ ಮತ್ತು ಆರೋಪಿತನು ಎಸಗಿರುವ ಅಪರಾಧವು ಘೋರ ಅಪರಾಧವಾಗಿದ್ದು, ಜೀವಾವಧಿ ಶಿಕ್ಷೆ ವಿಧಿಸುವಂತಹ

ಅಪರಾಧವಾಗಿರುತ್ತದೆ, ಆ ಕಾರಣದಿಂದ ಆರೋಪಿತನು ಸಲ್ಲಿಸಿದ ನಿಯತಕಾಲಿಕ ಜಾಮೀನು ಅರ್ಜಿಯನ್ನು ವಜಾಮಾಡಬೇಕೆಂದು ಕೋರಿಕೊಂಡಿರುತ್ತಾರೆ.

12. ಈ ಪ್ರಕರಣದ ಕಡತಗಳನ್ನು ಪರಿಶೀಲಿಸಲಾಗಿ, ಈ ಪ್ರಕರಣದಲ್ಲಿ ಆರೋಪಿತನು ದಿನಾಂಕ 28/02/2025 ರಂದು ಫಿರ್ಯಾದುದಾರ ಆರಕ್ಷಕರಿಂದ ಬಂಧನಕ್ಕೊಳಪಟ್ಟು ಸಿರುಗುಪ್ಪದ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ನಂತರ ಆತನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿರುತ್ತದೆ ಮತ್ತು ಅಂದಿನಿಂದ ಇಂದಿನವರೆಗೂ ಆತನು ನ್ಯಾಯಾಂಗ ಅಭಿರಕ್ಷೆಯಲ್ಲಿರುತ್ತಾನೆ.

13. ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದಾಗ ಆರೋಪಿತನು ಕುಡಿದು ಬಂದು ಫಿರ್ಯಾದುದಾರರು/ಚಾಸಾ- 1 ಇವರ ಮನೆಯ ಮುಂದೆ ಕೂಗಾಡುತ್ತಿದ್ದುದರಿಂದ, ಚಾಸಾ- 1 ಇವರು ಮನೆಯ ಮುಂದೆ ಕೂಗಾಡಬಾರದು ಎಂದು ಹೇಳಿದ ದ್ವೇಷದಿಂದ, ಆರೋಪಿತನು ಮಾರಕಾಸ್ತ್ರವಾದ ಈಳಿಗೆಯಿಂದ ಚಾಸಾ- 1 ಇವರ ಮೇಲೆ ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದಲ್ಲದೇ, ಫಿರ್ಯಾದುದಾರರು ಸಿರುಗುಪ್ಪದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದ ಸಮಕ್ಷಮ ನೀಡಿದ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 164 ರಡಿಯಲ್ಲಿ ನೀಡಿದ ಹೇಳಿಕೆಯನ್ನು ಪರಿಶೀಲನೆ ಮಾಡಿದಾಗ ಫಿರ್ಯಾದುದಾರರು ಆರೋಪಿತನು ಮನೆಯ ಮುಂದೆ ಬಂದು ಕುಡಿದ ಅಮಲಿನಲ್ಲಿ ಕೂಗೂಡುತ್ತಿದ್ದಾಗ, ತಾನು ಈ ಬಗ್ಗೆ ಕೇಳಿದಾಗ ಆರೋಪಿತನು ಅವಾಚ್ಯ ಶಬ್ಧಗಳಿಂದ ಬೈದು, ಈಳಿಗೆಯನ್ನು ತೆಗೆದುಕೊಂಡು ಬಂದು ತನ್ನ

ಎಡಗೈಗೆ, ಭುಜಕ್ಕೆ, ಹಣೆಗೆ ಮತ್ತು ಬಲಗೈಗೆ ಹೊಡೆದನು, ಆಗ ತನಗೆ ರಕ್ತ ಬಂದಿರುತ್ತದೆ ಎಂದು ನುಡಿದಿರುವುದು ಕಂಡುಬರುತ್ತದೆ.

14. ಭಾರತೀಯ ನ್ಯಾಯ ಸಂಹಿತೆಯ ಕಲಂ 109 ರ ಅಡಿಯಲ್ಲಿ ಅಪರಾಧವಾಗಬೇಕಾದರೆ ಆಪಾದಿತನ ಉದ್ದೇಶವು ಕೊಲೆ ಮಾಡುವುದು ಆಗಿರತಕ್ಕದ್ದು ಮತ್ತು ಹಾಗೆ ಕೊಲೆ ಮಾಡುವ ಉದ್ದೇಶದಿಂದ ಅವನು ಒಂದು ಕೃತ್ಯವನ್ನು ಮಾಡತಕ್ಕದ್ದು. ಆಪಾದಿತನ ಅಪರಾಧವನ್ನು ಮಾಡಲು ಎಲ್ಲ ಪೂರ್ವ ತಯಾರಿಯನ್ನು ಮಾಡಿಕೊಂಡು ಅನಂತರ ಅದನ್ನು ಕಾರ್ಯರೂಪದಲ್ಲಿ ತರಲು ಕ್ರಮವನ್ನು ಕೈಗೊಂಡಿದ್ದು ಆಗಿರಬೇಕು, ಆಪಾದಿತನು ಹಾಗೆ ಕೈಗೊಂಡ ಕ್ರಮವು ಅಪರಾಧ ಮಾಡಬೇಕೆಂಬ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿಯೇ ಇತ್ತು ಎಂದಾಗಿರಬೇಕು. ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ನೋಡಿದಾಗ ಈ ಮೇಲೆ ಹೇಳಿರುವಂತಹ ಸಂಗತಿಗಳು ಮೇಲ್ನೋಟಕ್ಕೆ ಕಂಡುಬರುವುದಿಲ್ಲ.

15. ಅದಲ್ಲದೇ, ಈ ಪ್ರಕರಣದಲ್ಲಿ ಹಾಜರುಪಡಿಸಿದ ಫಿರ್ಯಾದುದಾರರ/ಚಾಸಾ- 1 ಇವರ ಗಾಯದ ಪ್ರಮಾಣ ಪತ್ರವನ್ನು ನೋಡಿದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ 1 ರಿಂದ 4 ನೇ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತವೆ ಮತ್ತು 5 ನೇ ಗಾಯವು ಗಂಭೀರ ಸ್ವರೂಪದ್ದಾಗಿರುತ್ತದೆ ಎಂದು ನಮೂಸಿರುವುದು ಕಂಡುಬರುತ್ತದೆ. ಅದರಂತೆ, ಈ ಪ್ರಕರಣದಲ್ಲಿ ಹಾಜರುಪಡಿಸಿದ ಬಿಡುಗಡೆ ಸಾರಾಂಶವನ್ನು ನೋಡಿದಾಗ ಫಿರ್ಯಾದಿಯು ದಿನಾಂಕ 28/02/2025 ರಂದು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿದ್ದು, ದಿನಾಂಕ 02/03/2025 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುವುದು

ಕಂಡುಬರುತ್ತದೆ. ಪ್ರಸುತ್ತ ಫಿರ್ಯಾದುದಾರರು/ಚಾಸಾ- 1 ಇವರ ಜೀವಕ್ಕೆ ಯಾವುದೇ ಅಪಾಯ ಇಲ್ಲ, ಅವರ ಸ್ಥಿತಿ ಸ್ಥಿರವಾಗಿದೆ ಮತ್ತು ಅವರು ಸುರಕ್ಷಿತವಾಗಿದ್ದಾರೆ ಎಂದು ಕಂಡುಬರುತ್ತದೆ.

16. ಆರೋಪಿತನ ಮೇಲೆ ಹೊರಿಸಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ 109 ರಡಿಯಲ್ಲಿನ ಅಪರಾಧವು ಜೀವಾವಧಿ ಅಥವಾ ಮರಣದಂಡನೆ ವಿಧಿಸುವಂತಹ ಅಪರಾಧವಾಗಿರುವುದಿಲ್ಲ ಮತ್ತು ಈ ನ್ಯಾಯಾಲಯದ ಕಾರ್ಯ ವ್ಯಾಪ್ತಿಯಲ್ಲಿ ವಿಚಾರಣೆಗೆ ಒಳಪಡುವಂತಹ ಅಪರಾಧವಾಗಿರುತ್ತದೆ. ಆರೋಪಿತನು ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕು ಕುರುವಳ್ಳಿ ಗ್ರಾಮದ ಖಾಯಂ ನಿವಾಸಿಯಾಗಿದ್ದು, ಆರೋಪಿತನು ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಳ್ಳುತ್ತಾನೆ ಎಂದು ಈ ಹಂತದಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ. ಅದಲ್ಲದೇ, ಈ ಪ್ರಕರಣದಲ್ಲಿ ಆರೋಪಿಸಿರುವಂತಹ ಅಪರಾಧವನ್ನು ಆರೋಪಿತನು ಎಸಗಿರುತ್ತಾನೆಯೇ ಎಂಬುದನ್ನು ಪೂರ್ಣ ಪ್ರಮಾಣದ ವಿಚಾರಣೆಯಿಂದ ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ. ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡು ತೀರ್ಮಾನಿಸಲು ಸಾಕಷ್ಟು ಸಮಯಾವಕಾಶ ಸಹ ಬೇಕಾಗುತ್ತದೆ.

17. ಈಗಾಗಲೇ ತನಿಖೆಯು ಮುಕ್ತಾಯಗೊಂಡಿದ್ದು, ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲಾಗಿರುತ್ತದೆ. ಆರೋಪಿತನ ವಿರುದ್ಧ ಪ್ರಸ್ತುತ ಪ್ರಕರಣದ ನೋಂದಣಿಯಾಗುವವರೆಗೆ, ಆತನಗೆ ಬೇರೆ ಯಾವುದೇ ಅಪರಾಧಿಕ ಪೂರ್ವಾಪರ ಹಿನ್ನೆಲೆ ಇರಲಿಲ್ಲ. ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ, ಆರೋಪಿತನ ವಿರುದ್ಧ ಪ್ರಾಥಮಿಕವಾಗಿ ಆರೋಪಪಟ್ಟಿ ಸಲ್ಲಿಸುವುದನ್ನು ದೃಢೀಕರಿಸುವ ಸಾಕ್ಷ್ಯಗಳಿದ್ದರೂ,

ಆರೋಪಪಟ್ಟಿ ಸಲ್ಲಿಸಲಾಗಿರುವುದರಿಂದ ಆರೋಪಿಯನ್ನು ನ್ಯಾಯಾಂಗ ಬಂಧನದಲ್ಲಿ ಮುಂದುವರಿಸುವುದು ಇನ್ನು ಮುಂದೆ ಅಗತ್ಯವಿರುವುದಿಲ್ಲ ಎಂದು ಕಂಡು ಬರುತ್ತದೆ. ಆ ಕಾರಣದಿಂದ, ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡು ತೀರ್ಮಾನಿಸಲು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ಆದ್ದರಿಂದ ಆರೋಪಿತನನ್ನು ನ್ಯಾಯಾಂಗ ಬಂಧನದಲ್ಲಿರಿಸಿ ವಿಚಾರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಒಬ್ಬ ವ್ಯಕ್ತಿ ತಪ್ಪಿತಸ್ಥನೆಂದು ಸಾಬೀತಾಗುವವರೆಗೂ ನಿರಪರಾಧಿ ಮತ್ತು ಜಾಮೀನು ನಿಯಮವಾಗಿದ್ದರೆ ಜೈಲು ಶಿಕ್ಷೆ ಅದಕ್ಕೆ ಅಪವಾದವಾಗಿರುತ್ತದೆ. ಈ ಹಂತದಲ್ಲಿ ಅಭಿಯೋಜನೆಯು ಈ ಪ್ರಕರಣದ ಆರೋಪಿತನು ಪೂರ್ವಗತ ಅಪರಾಧ ಹಿನ್ನೆಲೆವುಳ್ಳವನು ಎಂದು ನಿರೂಪಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಅದಲ್ಲದೇ, ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ, ಆತನು ತಲೆಮರೆಸಿಕೊಳ್ಳುವ ಹಾಗೂ ವಿಚಾರಣೆಗೆ ತೊಡಕಾಗುವ ಸಾಧ್ಯತೆ ಇರುತ್ತದೆ ಎಂಬುದು ಅಭಿಯೋಜನೆಯ ಗ್ರಹಿಕೆಯಾಗಿರುತ್ತದೆ. ಸೂಕ್ತ ಹಾಗೂ ಕಠಿಣ ಷರತ್ತನ್ನು ವಿಧಿಸುವ ಮೂಲಕ ಆತನ ಹಾಜರಾತಿಯನ್ನು ನ್ಯಾಯಾಲಯದ ಸಮಕ್ಷಮ ಪಡೆಯಬಹುದಾಗಿದೆ. ತನಿಖೆ ಈಗಾಗಲೇ ಪೂರ್ಣಗೊಂಡಿರುವುದರಿಂದ ಹಾಗೂ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದರಿಂದ, ನ್ಯಾಯಾಲಯದ ಮುಂದೆ ವಿಚಾರಣಾ ಸಮಯದಲ್ಲಿ ಆರೋಪಿತನ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಹೊರತುಪಡಿಸಿ ಯಾವುದೇ ಕಾರಣಕ್ಕೂ ಆರೋಪಿತನನ್ನು ನ್ಯಾಯಾಂಗ ಬಂಧನದಲ್ಲಿಡುವ ಅಗತ್ಯವಿಲ್ಲ. ಅಂತಹ ಸಂದರ್ಭಗಳಲ್ಲಿ, ಆರೋಪಿತನ ಬಂಧನವು ಪೂರ್ವ-ವಿಚಾರಣೆಯ ಶಿಕ್ಷೆಗೆ ಗುರಿಪಡಿಸಿದಂತಾಗುತ್ತದೆ.

18. ಆರೋಪಿತನ ಮೇಲೆ ಹೊರಿಸಲಾಗಿರುವ ಭಾರತೀಯ ನ್ಯಾಯ ಸಂಹಿತೆಯ ಕಲಂ 109 ರಡಿ ಅಪರಾಧವು ಈ ನ್ಯಾಯಾಲಯದ ಕಾರ್ಯ ವ್ಯಾಪ್ತಿಯಲ್ಲಿ ವಿಚಾರಣೆಗೆ ಒಳಪಡುವಂತಹ ಅಪರಾಧವಾಗಿರುತ್ತದೆ. ಅದಲ್ಲದೇ, ಆರೋಪಿತನು ತನಗೆ ನಿಯತಕಾಲಿಕ ಜಾಮೀನು ನೀಡಿದರೆ ನ್ಯಾಯಾಲಯವು ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನು ಕೊಡುವುದಾಗಿ ನಿವೇದಿಸಿಕೊಂಡಿರುತ್ತಾನೆ.

19. ಪ್ರಸ್ತುತ, ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದು, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುವುದರಿಂದ, ಆರೋಪಿತನು ದಿನಾಂಕ 28/02/2025 ರಿಂದ ಇಲ್ಲಿಯವರೆಗೆ ಅಂದರೆ ಏಳು ತಿಂಗಳಿಗೂ ಹೆಚ್ಚು ಕಾಲ ನ್ಯಾಯಾಂಗ ಬಂಧನಕ್ಕೆ ಒಳಗಾಗಿರುವುದರಿಂದ, ನನ್ನ ಅಭಿಪ್ರಾಯದಲ್ಲಿ, ಆತನನ್ನು ನಿಯತಕಾಲಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ, ಯಾವುದೇ ಅನ್ಯಾಯವಾಗುವುದಿಲ್ಲ. ಈ ಸನ್ನಿವೇಶದಲ್ಲಿ, ಆರೋಪಿತನು ನಿಯಮಿತ ಜಾಮೀನು ಮಂಜೂರು ಮಾಡಲು ಮಾಡಿದ ಅರ್ಜಿಗೆ ಸಕಾರಾತ್ಮಕವಾಗಿ ಉತ್ತರಿಸಬೇಕಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಕಡತದಲ್ಲಿರುವ ದಾಖಲೆಗಳನ್ನು ಪರಿಗಣಿಸಿ, ಆರೋಪಿತನ ಪರವಾಗಿ ವಿವೇಚನೆಯನ್ನು ಚಲಾಯಿಸಲು ಮತ್ತು ಜಾಮೀನು ನೀಡಲು ಇದು ಸೂಕ್ತವಾದ ಪ್ರಕರಣವಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಆದರೂ ಸಹ, ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಆರೋಪಿತನು ದಸ್ತಗಿರಿ ಆದಾಗಿನಿಂದ ನ್ಯಾಯಾಂಗ ಬಂಧನದಲ್ಲಿರುವುದನ್ನು ಗಮನದಲ್ಲಿಟ್ಟುಕೊಂಡು, ಅಭಿಯೋಜನೆಯ ಆತಂಕವನ್ನು ನಿವಾರಿಸಲು ಕೆಲವು ಕಠಿಣ ಷರತ್ತುಗಳನ್ನು ವಿಧಿಸುವ ಮೂಲಕ ಆರೋಪಿತನಿಗೆ ನಿಯತಕಾಲಿಕ ಜಾಮೀನು ನೀಡುವುದು ಮತ್ತು ಜಾಮೀನು

ಅರ್ಜಿಯನ್ನು ಪುರಸ್ಕರಿಸುವುದು ನ್ಯಾಯೋಚಿತ ಎಂಬ ಅಭಿಪ್ರಾಯಕ್ಕೆ ಬಂದು, ಅಂಶ 1 ಕ್ಕೆ **ಸಕಾರಾತ್ಮಕ**ವಾಗಿ ಉತ್ತರಿಸಲಾಗಿದೆ.

20. **ಅಂಶ 2 -** ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡಃ-

**ಆ ದೇ ಶ**

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ರ ಕಲಂ 483 ರಡಿಯಲ್ಲಿ ಆರೋಪಿತನ ಪರವಾಗಿ ಸಲ್ಲಿಸಿದ ನಿಯತಕಾಲಿಕ ಜಾಮೀನು ಅರ್ಜಿಯನ್ನು ಪುರಸ್ಕರಿಸಿ, ಆರೋಪಿತನಿಗೆ ನಿಯತಕಾಲಿಕ ಜಾಮೀನನ್ನು ಈ ಕೆಳಕಂಡ ಷರತ್ತುಗಳೊಂದಿಗೆ ಮಂಜೂರು ಮಾಡಲಾಗಿದೆ.

**ಷರತ್ತುಗಳು**

1) ಆರೋಪಿತನು ₹1,00,000-00 ಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆ ಪತ್ರಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರು ಜಾಮೀನುದಾರರನ್ನು ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ನೀಡತಕ್ಕದ್ದು.

2) ಆರೋಪಿತನು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು.

3) ಆರೋಪಿತನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷ ವಾಗಿಯಾಗಲೀ ಅಭಿಯೋಜನೆಯ ಸಾಕ್ಷ್ಯವನ್ನು ಯಾವುದೇ ರೀತಿ ವಿರೂಪಗೊಳಿಸತಕ್ಕದ್ದಲ್ಲ ಮತ್ತು ಅಭಿಯೋಜನೆಯ ಸಾಕ್ಷಿಗಳನ್ನು ಹೆದರಿಸುವ ಬೆದರಿಸುವ ಅಥವಾ ನಾಶಪಡಿಸುವ ಪ್ರಯತ್ನ ಮಾಡಬಾರದು.

4) ಆರೋಪಿತನು ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಮತ್ತು ಪ್ರಕರಣದ ತ್ವರಿತ ವಿಚಾರಣೆಗೆ ನ್ಯಾಯಾಲಯಕ್ಕೆ ಸಹಕರಿಸತಕ್ಕದ್ದು.

5) ಆರೋಪಿತನು ಭವಿಷ್ಯದಲ್ಲಿ ಪುನಃ ಈ ರೀತಿಯ ಯಾವುದೇ ಕೃತ್ಯದಲ್ಲಿ ಭಾಗಿಯಾಗಬಾರದು.

(ಈ ಮೇಲಿನ ಉಕ್ತಲೇಖನವನ್ನು ಶೀಘ್ರಲಿಪಿಗಾರರು ಗ್ರೇಡ್- I ಇವರಿಗೆ ನೇರವಾಗಿ ಗಣಕಯಂತ್ರ ಪರದೆ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ಅದನ್ನು ತಿದ್ದುಪಡಿ ಮಾಡಿ, ರುಜು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 15 **ನೇ ದಿವಸ ಸೆಪ್ಟೆಂಬರ್ ಮಾಹೆಯ 2025** ನೇ ಇಸವಿಯಂದು ಆದೇಶವನ್ನು ಘೋಷಿಸಲಾಯಿತು.)

K G SHANTHI

Digitally signed by K G SHANTHI
Location: PRINCIPAL DISTRICT AND SESSIONS JUDGE,BALLARI
Date: 2025.09.15 17:36:56 +0530

**(ಶ್ರೀಮತಿ ಕೆ.ಜಿ.ಶಾಂತಿ)**

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, **ಬಳ್ಳಾರಿ.**

–